QP CODE: 30239

ದ್ವಿತೀಯ ಸೆಮಿಸ್ಟರ್ ಬಿ.ಎ. ಪದವಿ ಪರೀಕ್ಷೆ, ಮೇ / ಜೂನ್, 2026

(ಎನ್‌ಇಪಿ ಸ್ಕೀಂ)

ಐಚ್ಛಿಕ ಕನ್ನಡ ಪತ್ರಿಕೆ - 4

(NAB 0390) ಅನಿಕೇತನ - 2

ಆಧುನಿಕ ಪೂರ್ವ ಕನ್ನಡ ಸಾಹಿತ್ಯ ಚರಿತ್ರೆ (ಘಟಕ - 4)

ಅವಧಿ : 2 ಗಂಟೆಗಳು ಗರಿಷ್ಠ ಅಂಕಗಳು : 60

ವಿದ್ಯಾರ್ಥಿಗಳಿಗೆ ಸೂಚನೆಗಳು:

1. ವಿದ್ಯಾರ್ಥಿಯು ವಿಭಾಗ ಸಂಖ್ಯೆ ಹಾಗೂ ಪ್ರಶ್ನೆ ಸಂಖ್ಯೆಗಳನ್ನು ಸ್ಪಷ್ಟವಾಗಿ ಮಾರ್ಜಿನ್ ಗೆರೆಯ ಒಳಗೆ ಬರೆಯಬೇಕು.
2. ವಿಭಾಗ ಸಂಖ್ಯೆ ಹಾಗೂ ಪ್ರಶ್ನೆ ಸಂಖ್ಯೆಗಳನ್ನು ನಮೂದಿಸದೇ ಇರುವ ಉತ್ತರಗಳನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ.
3. ವಿಭಾಗ - I ರಲ್ಲಿನ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರವನ್ನು ಉತ್ತರ ಪತ್ರಿಕೆಯ ಮೊದಲ ಪುಟದಲ್ಲಿ ಬರೆಯಬೇಕು ಹಾಗೂ ಅದೇ ಪ್ರಶ್ನೆಗಳಿಗೆ ಉತ್ತರವನ್ನು ಪುನರಾವರ್ತಿಸಬಾರದು.
4. ಪ್ರಶ್ನೆ ಪತ್ರಿಕೆಯಲ್ಲಿನ ವಿಭಾಗ - I ರಲ್ಲಿನ ಬಹು ಆಯ್ಕೆಯ ಪ್ರಶ್ನೆಗಳಿಗೆ ನೀಡಲಾದ ಆಯ್ಕೆ ಉತ್ತರಗಳ (Options) ಮೇಲೆ ಯಾವುದೇ ರೀತಿಯ ಗುರುತು ಸೂಚಕ ಚಿಹ್ನೆಗಳಾದ ವೃತ್ತ ಹಾಕುವುದು, ಚುಕ್ಕೆ ಇಡುವುದು, ಸರಿ ಗುರುತು ಮಾಡುವುದು (✓) ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಲಾಗಿದೆ. ಪ್ರಶ್ನೆ ಪತ್ರಿಕೆಯ ಮೇಲೆ (ನೋಂದಣಿ ಸಂಖ್ಯೆಯನ್ನು ಹೊರತುಪಡಿಸಿ) ಬೇರೆ ಯಾವುದೇ ತರಹದ ಬರವಣಿಗೆಗಳನ್ನು ಮಾಡಬಾರದು.

ವಿಭಾಗ - I

I. ಸರಿಯಾದ ಉತ್ತರವನ್ನು ಆಯ್ದು ಬರೆಯಿರಿ. **(10x1=10)**

I-1. ಮ್ಯಾನ್ ಕೈಂಡ್ ಪತ್ರಿಕೆ ಪ್ರಕಟಣೆಯ ವರ್ಷ
(ಅ) 1956 (ಆ) 1957 (ಇ) 1958 (ಈ) 1954

I-2. ಲಂಕೇಶ್ ಅವರ ಹುಟ್ಟಿದ ಊರು?
(ಅ) ರಾಮನಹಳ್ಳಿ (ಆ) ಹಾಡೋಹಳ್ಳಿ (ಇ) ಕೊನಗವಳ್ಳಿ (ಈ) ಬೀಗನವಳ್ಳಿ

I-3. ಚಂದ್ರಗೀರಿಯ ತೀರದಲ್ಲಿ ಯಾರ ಕೃತಿ?
(ಅ) ಜಾಹ್ನವಿ ಬಿ.ಟಿ. (ಆ) ಚಂದ್ರಮತಿ
(ಇ) ಎಚ್.ನಾಗವೇಣಿ (ಈ) ಶ್ರೀಮತಿ ಸಾರಾ ಅಬೂಬಕ್ಕರ್

I-4. ಕರ್ನಾಟಕ ನಂದಿನಿ ಪತ್ರಿಕೆಯನ್ನು ಸ್ಥಾಪಿಸಿದವರು
(ಅ) ದ.ರಾ.ಬೇಂದ್ರೆ (ಆ) ತ್ರಿವೇಣಿ
(ಇ) ಎಚ್.ವಿ. ಸಾವಿತ್ರಮ್ಮ (ಈ) ನಂಜನಗೂಡು ತಿರುಮಲಾಂಬ

I-5. ಪ್ರೊ. ಕಾಳೇಗೌಡ ನಾಗವಾರರ ಕೃತಿ
(ಅ) ಕರಾವಳಿಯಲ್ಲಿ ಗಂಗಾಲಗ್ನ (ಆ) ಶಬರಿ
(ಇ) ಬುಗರಿ (ಈ) ವೈಶಾಖ

I-6. ನವ್ಯ ಎಂದು ಮೊದಲ ಬಾರಿಗೆ ಗುರುತಿಸಿದವರು
(ಅ) ಕುವೆಂಪು (ಆ) ಪುತಿನ
(ಇ) ಡಿ.ಎಚ್. ಲಾರೆನ್ಸ್ (ಈ) ಗೋಪಾಲಕೃಷ್ಣ ಅಡಿಗ

I-7. ಅರಸು ರಾಕ್ಷಸ ಮಂತ್ರಿ ಮೊರೆವ ಹುಲಿ ಈ ವಾಕ್ಯದ ಕರ್ತೃ
(ಅ) ಲಕ್ಷ್ಮೀಶ (ಆ) ಪಂಪ (ಇ) ಕುಮಾರವ್ಯಾಸ (ಈ) ಅಲ್ಲಮಪ್ರಭು

I-8. ಮೈಸೂರು ವಿಶ್ವವಿದ್ಯಾಲಯ ಸ್ಥಾಪನೆಯಾದ ವರ್ಷ
(ಅ) 1926 (ಆ) 1906 (ಇ) 1915 (ಈ) 1916

I-9. ಬಂಗಾಳಿಯ ದುರ್ಗೇಶ ನಂದಿನಿಯನ್ನು ಕನ್ನಡಕ್ಕೆ ಅನುವಾದಿಸಿದವರು
(ಅ) ಬಿ. ವೆಂಕಟಾಚಾರ್ಯ (ಆ) ಗಳಗನಾಥರು
(ಇ) ಶಾಂತಕವಿಗಳು (ಈ) ಹಟ್ಟಿಯಂಗಡಿ ನಾರಾಯಣರಾಯರು

I-10. ಕಯ್ಯೂರಿನ ಭೂ ಹೋರಾಟವನ್ನು ಕುರಿತ ನಿರಂಜನ ಅವರ ಕಾದಂಬರಿ
(ಅ) ಚಿರಸ್ಮರಣೆ (ಆ) ಸಂಧ್ಯಾರಾಗ
(ಇ) ಭೂಮಿತಾಯಿಯ ಚೊಚ್ಚಲ ಮಗ (ಈ) ದಾಹ

ವಿಭಾಗ - II

II. ಯಾವುದಾದರೂ ಐದು ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(5x3=15)**

II-1. ಮುದ್ದಣ
II-2. ನವ್ಯ ಕಾಲಘಟ್ಟ
II-3. ಪ್ರಗತಿಶೀಲದ ಪ್ರಮುಖ ಕೃತಿಗಳು
II-4. ಸಿದ್ಧಲಿಂಗಯ್ಯನವರ ಕಾವ್ಯ
II-5. ದೇವನೂರು ಮಹದೇವ
II-6. ಮಹಿಳಾ ಸಾಹಿತ್ಯ
II-7. ಕನ್ನಡ ಸಾಹಿತ್ಯ ಪರಿಷತ್ತು
II-8. ಜಲಗಾರದ ತಿರುಕ

ವಿಭಾಗ - III

III. ಯಾವುದಾದರೂ ಮೂರು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ. **(3x5=15)**

III-1. ನವೋದಯ ಸಾಹಿತ್ಯದ ಸ್ವರೂಪ ಮತ್ತು ಕೃತಿಗಳನ್ನು ಚರ್ಚಿಸಿ.
III-2. ಜಲಗಾರ ಕೃತಿಯ ಮಹತ್ವವನ್ನು ತಿಳಿಸಿ.
III-3. ಲೋಹಿಯಾ ಅವರ ಲೇಖನದ ಆಶಯವೇನು?
III-4. ಬೆಳಗಿನ ವರ್ಣನೆಯನ್ನು ತಿಳಿಸಿ.
III-5. ಯಜ್ಞವನ್ನು ಕೋವೂರು ಬಯಲು ಮಾಡಿದ ಬಗೆ ಹೇಗೆ?

ವಿಭಾಗ - IV

IV. ಯಾವುದಾದರೂ ಒಂದು ಪ್ರಶ್ನೆಗಳಿಗೆ ಉತ್ತರಿಸಿ. **(2x10=20)**

IV-1. ಆಧುನಿಕ ಕನ್ನಡ ಸಾಹಿತ್ಯದ ಹಿನ್ನೆಲೆ, ಸ್ವರೂಪ, ಮಹತ್ವಗಳನ್ನು ತಿಳಿಸಿ.

ಅಥವಾ

ಆಧುನಿಕ ಕನ್ನಡ ಸಾಹಿತ್ಯದ ವಿಧಗಳನ್ನು ಉದಾಹರಣೆಯೊಂದಿಗೆ ವಿವರಿಸಿ.

IV-2. ಪ್ರಗತಿಶೀಲ ಸಾಹಿತ್ಯದ ಹಿನ್ನೆಲೆಯಲ್ಲಿ ಬೂಟ್ ಪಾಲೀಶ್ ಕಥೆಯ ಮಹತ್ವವನ್ನು ಚರ್ಚಿಸಿ.

ಅಥವಾ

ನವೋದಯ ಸಾಹಿತ್ಯದ ಹಿನ್ನೆಲೆಯಲ್ಲಿ ಮೂಕಜ್ಜಿಯ ಕನಸುಗಳನ್ನು ವಿವರಿಸಿ.

* * *